ಈ. ಭೂಮಿ ಕಳೆದುಕೊಂಡ ರೈತಾಪಿ ಕುಟುಂಬದಲ್ಲಿ ಎಷ್ಟು ಸದಸ್ಯರಿಗೆ ಉದ್ಯೋಗವನ್ನು ಕಲ್ಪಿಸಿ ಕೊಡಲಾಗಿದೆ.

ಉ. ಉಳಿದ ರೈತ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಆರ್.ವಿ. ದೇಶ್‌ಪಾಂಡೆ ಮಾನ್ಯ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ಸಿಬ್ಬಂದಿ ವರ್ಗದವರ ಒಟ್ಟು ಸಂಖ್ಯೆ: 1649

ಗ್ರೂಪ್ ಎ	: 111
ಗ್ರೂಪ್ ಬಿ	: 432
ಗ್ರೂಪ್ ಸಿ	: 446
ಗ್ರೂಪ್ ಡಿ	: 660
ಒಟ್ಟು	: 1649

ಆ. ಕನ್ನಡಿಗರ : 1250

ಕನ್ನಡೇತರ : 309

ಇ. - 302 -

ಈ. - 214 -

ಉ. ಉಳಿದ 8 ರೈತಾಪಿ ಸದಸ್ಯರಿಗೆ ಈಗಾಗಲೇ ದಿನಾಂಕ: 14.12.01 ಮತ್ತು 16.2.2002 ರಂದು ಸಭೆ ಕರೆದು ಪ್ರತಿ ಕುಟುಂಬದಲ್ಲಿನ ಒಬ್ಬ ಸದಸ್ಯನಿಗೆ ಅವರ ವಿದ್ಯೆಗೆ ಅನುಗುಣವಾಗಿ ಹೆಸರನ್ನು ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್‌ಗೆ ಸೂಚಿಸುವಂತೆ ಆದೇಶಿಸಲಾಗಿದೆ.

ಹೊಸ ಉದ್ಯಮ ನೀತಿಯಿಂದಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನಷ್ಟ

113(131): ಶ್ರೀ ಯೋಗೀಶ್ ಭಟ್ (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಸರ್ಕಾರ ಹೊಸ ಉದ್ಯಮ ನೀತಿಯನ್ನು ರೂಪಿಸಿದೆಯೇ, ನೀತಿಯಲ್ಲಿನ ಪರಮುಖ ಅಂಶಗಳೇನು;

ಆ. ಹಿಂದಿನ ಉದ್ಯಮ ನೀತಿಗೂ ಈಗಿನ ಉದ್ಯಮ ನೀತಿಗೂ ಇರುವ ವ್ಯತ್ಯಾಸಗಳೇನು;

ಇ. ಹೊಸ ಉದ್ಯಮ ನೀತಿಯನ್ನು ರೂಪಿಸಿದಾಗಿನಿಂದ ಎಷ್ಟು ಜನರು ಉದ್ದಿಮೆ ಸ್ಥಾಪನೆ ಮಾಡಲು ಮುಂದೆ ಬಂದಿದ್ದಾರೆ, (ವಿವರಗಳನ್ನು ನೀಡುವುದು)

ಈ. ಹೊಸ ಉದ್ಯಮ ನೀತಿಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಆಪಾರ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್.ವಿ. ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಗ ಅನುಕೂಲವಾಗುವಂತೆ ಸರ್ಕಾರವು ಹೊಸ ಕೈಗಾರಿಕಾ ನೀತಿಯನ್ನು - 2001 - 2006ನ್ನು ಬಿಡುಗಡೆಗೊಳಿಸಿದ್ದು ಸದರಿ ನೀತಿಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಅಗತ್ಯವಾದ:-

1. ಮೂಲಭೂತ ಸೌಕರ್ಯಗಳ ಸೃಷ್ಟಿ
2. ಮಾನವ ಸಂಪನ್ಮೂಲ ಬೆಳವಣಿಗೆ
3. ತಾಂತ್ರಿಕ ಉನ್ನತೀಕರಣ ಹಾಗೂ
4. ರೋಗಗ್ರಸ್ತ ಕೈಗಾರಿಕೆಗಳ ಪುನಶ್ಚೇತನಕ್ಕೆ ಒತ್ತು ನೀಡಲಾಗಿದೆ.

ಹೊಸ ಕೈಗಾರಿಕಾ ನೀತಿಯ ಪ್ರಮುಖ ಧ್ಯೇಯೋದ್ದೇಶಗಳು -

ಅ. ಮಾರುಕಟ್ಟೆ ಆಧಾರಿತ ಹಾಗೂ ಸಂಪನ್ಮೂಲ ಆಧಾರಿತ ಕೈಗಾರಿಕಾ ಕ್ಷೇತ್ರಗಳಿಗೆ ಪ್ರೋತ್ಸಾಹ

ಆ. ತ್ವರಿತ ತಾಂತ್ರಿಕ ಉನ್ನತೀಕರಣ ಮುಖೇನ ಸಂಸ್ಕರಣ ಹಾಗೂ ಉತ್ಪಾದನೆಯಲ್ಲಿ ಮೌಲ್ಯ ಹೆಚ್ಚಳಕ್ಕೆ ಪ್ರೋತ್ಸಾಹ

ಇ. ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಖನಿಜ ಹಾಗೂ ಮಾನವ ಸಂಪನ್ಮೂಲಗಳ ಸಮಗ್ರ ಬಳಕೆಗೆ ಪ್ರೋತ್ಸಾಹ

ಈ. ರಾಜ್ಯದ ಕೈಗಾರಿಕಾ ಉತ್ಪಾದನೆ, ಹೊಸ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳನ್ನು ತಲುಪುವಲ್ಲಿ ಹಾಗೂ ಗುಣಮಟ್ಟ ಕಾಪಾಡುವಲ್ಲಿ ನೆರವು.

ಉ. ತಂತ್ರಜ್ಞಾನ ಆಧಾರಿತ ಹಾಗೂ ಸೇವಾ ಕ್ಷೇತ್ರ ಕೈಗಾರಿಕಾ ಬೆಳವಣಿಗೆ ಒತ್ತು ಕೊಡುವುದು.

ಊ. ಮಾರುಕಟ್ಟೆ ಆಧಾರಿತ ಹಾಗೂ ಖಾಸಗೀ ಬಂಡವಾಳ ಹೂಡಿಕೆ ಆಧಾರಿತ ಕೈಗಾರಿಕಾ ಬೆಳವಣಿಗೆಗೆ ಒತ್ತು.

ಊ. ಮಾರುಕಟ್ಟೆ ಆಧಾರಿತ ಹಾಗೂ ಖಾಸಗೀ ಬಂಡವಾಳ ಹೂಡಿಕೆ ಆಧಾರಿತ ಕೈಗಾರಿಕಾ ಬೆಳವಣಿಗೆಗೆ ಒತ್ತು.

ಋ. ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಸರ್ಕಾರ ಗಮನ ನೀಡುವುದು.

ಋೂ. ಆಯ್ದ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸಲ್ಪಡುವ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಪ್ರವೇಶ ತೆರಿಗೆ ವಿನಾಯಿತಿ, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ ಕೈಗಾರಿಕಾ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ಹಿಂದಿನ ಕೈಗಾರಿಕಾ ನೀತಿಯಲ್ಲಿ

ಒದಗಿಸಲಾಗಿದ್ದ ಸಹಾಯ ಮತ್ತು ಮಾರಾಟ ತೆರಿಗೆ ರಿಯಾಯಿತಿಗಳ ಬದಲಾಗಿ, ಹೊಸ ಉದ್ಯಮ ನೀತಿ-2001ರಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಮಾನವ ಸಂಪನ್ಮೂಲ ಬೆಳವಣಿಗೆ ಹಾಗೂ ತಾಂತ್ರಿಕ ಉನ್ನತೀಕರಣಕ್ಕೆ ಹೆಚ್ಚಿನ ಒತ್ತು ಕೊಡಲಾಗಿದೆ. ಇದರಿಂದ ಕೈಗಾರಿಕೆಗಳ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಒತ್ತು ದೊರೆಯಲಿದ್ದು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಕೈಗಾರಿಕೆಗಳು ಬೆಳೆಯಲು ಸಹಕಾರಿಯಾಗಿದೆ.

ಇ. ಹೊಸ ಕೈಗಾರಿಕಾ ನೀತಿಯು ಜಾರಿಗೆ ಬಂದಂದಿನಿಂದ ಅಂದರೆ ಏಪ್ರಿಲ್ 2001 ರಿಂದ ಜೂನ್ 2002ರವರಗೆ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಮುಖೇನ ಒಟ್ಟು 127 ಕೈಗಾರಿಕಾ ಯೋಜನೆಗೆ (ಪ್ರತಿ ಯೋಜನೆ ರೂ. 50.00 ಕೋಟಿಗಳಿಗಿಂತ ಕಡಿಮೆಬಂಡವಾಳ) ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 2527.60 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಯೋಜನೆಗಳು ಕಾರ್ಯಾರಂಭಗೊಂಡ ನಂತರ ಸುಮಾರು 55,450 ಜನರಿಗೆ ಉದ್ಯೋಗಾವಕಾಶ ಲಭಿಸಲಿದೆ. ಹಾಗೂ ಉನ್ನತ ಮಟ್ಟದ ಸಮಿತಿಯಲ್ಲಿ ಒಟ್ಟು 26 ಯೋಜನೆಗಳಿಗೆ (ಪ್ರತಿ ಯೋಜನೆ ರೂ. 50.00 ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ) ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 6950.67 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಯೋಜನೆಗಳು ಕಾರ್ಯಾರಂಭಗೊಂಡ ನಂತರ ಸುಮಾರು 40291 ಜನರಿಗೆ ಉದ್ಯೋಗವಕಾಶ ಲಭಿಸಿದೆ.

ಈ. ಈಗಾಗಲೇ ವಿವರಿಸಿರುವಂತೆ ಹೊಸ ಕೈಗಾರಿಕಾ ನೀತಿಯು ಮೂಲಭೂತ ಸೌಕರ್ಯ ತಾಂತ್ರಿಕ ಉನ್ನತೀಕರಣ ಹಾಗೂ ಮಾನವಸಂಪನ್ಮೂಲ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಬದಲಾಗಿ 1996ರ ಕೈಗಾರಿಕಾ ನೀತಿಯಡಿ ಒದಗಿಸಲಾಗಿದ್ದ ಮಾರಾಟಕರ ರಿಯಾಯಿತಿಯನ್ನು ದಿ: 1.1.2000 ರಿಂದ ಸರ್ಕಾರ ಹಿಂತೆಗೆದುಕೊಂಡಿದೆ.